International Journal of Kannada Research
www.kannadajournal.com

ISSN: 2454–5813
IJKR 2019; 5(1): 20-24
© 2019 IJKR
www.kannadajournal.com
Received: 07-11-2018
Accepted: 10-12-2018

**ಡಾ.ಶಿವರಾಜ. ಬಿ.ಇ.**
ಸಹ ಪ್ರಾಧ್ಯಾಪಕ, ಆಕ್ಸ್‌ಫರ್ಡ್ ಕಾಲೇಜ್,
ಎಚ್.ಎಸ್.ಆರ್.ಬಡಾವಣೆ,
ಬೆಂಗಳೂರು

**Correspondence**
**ಡಾ.ಶಿವರಾಜ ಬ್ಯಾಡರಹಳ್ಳಿ**
ಸಹ ಪ್ರಾಧ್ಯಾಪಕ, ಆಕ್ಸ್‌ಫರ್ಡ್ ಕಾಲೇಜ್,
ಎಚ್.ಎಸ್.ಆರ್.ಬಡಾವಣೆ,
ಬೆಂಗಳೂರು

# ಜನಪದ ಗೀತೆಗಳು ಮತ್ತು ವರ್ತಮಾನ

**ಡಾ.ಶಿವರಾಜ. ಬಿ.ಇ.**

ಜಾನಪದ ಸಾಹಿತ್ಯದಲ್ಲಿ 'ಜನಪದಗೀತೆ'ಗೆ ವಿಶೇಷವಾದ ಸ್ಥಾನವಿದೆ. ಬೇರೆ ಪ್ರಕಾರಗಳಿಗಿಂತ ತುಂಬಾ ಭಾವ ಪ್ರಧಾನವಾದ ಮಟ್ಟು ಇರುವುದರಿಂದ ಜನಪದಗೀತೆಗಳಿಗೆ ಒಂದು ತಾಳಬದ್ಧ, ಲಯಬದ್ಧವಾದ ಭಾವರೇಚಕಗಳು ಇರುತ್ತವೆ. ಜನಪದಗೀತೆ ಒಂದು ಅರ್ಥವತ್ತಾದ ಸಾಹಿತ್ಯದ ಸಾಲು ಇವಾಗಿವೆ. ಪ್ರಾಕೃತಿಕವಾಗಿ ಜನರ ಶ್ರಮದೊಂದಿಗೆ ಮೂಡಿಬಂದ ಜನಪದಗೀತೆಗಳು ಆಯಾಯ ಕಾಲಕ್ಕೆ ಅನ್ವಯವಾಗುವುದರ ಜೊತೆ ಶಿಷ್ಟಸಾಹಿತ್ಯಕ್ಕೆ ಬುನಾದಿ ಕೊಟ್ಟು ಮಾರ್ಗರೂಪಿಯಾದುದು. ರೂಪಕ, ಉಪಮೆ, ಸಂಕೇತಗಳೊಂದಿಗೆ ಮೈದಾಳಿದ 'ಜನಪದಗೀತೆ' ಹೆಸರಿಗೆ ತಕ್ಕಂತೆ ಜನರ ಪದವಾಗಿದೆ. ಕುಣಿತಕ್ಕೂ ಲಯವಿರುವುದರಿಂದ ಸಮೂಹದೊಳಗೆ ಇದನ್ನೇ ಹಾಡುತ್ತಾ ಮಾನವನ ಸಹಜ ಅಭಿವ್ಯಕ್ತಿ ಲಯಗಳನ್ನು ಅಂದೇ ಕಂಡುಕೊಂಡನು. ಇದು ಹುಟ್ಟಿನಿಂದ ಸಾವಿನವರೆಗೂ ವಿವಿಧ ರೀತಿಯ ವಿವಿಧ ವಯೋಮಾನಕ್ಕೆ ಗೇಯ ಪ್ರಧಾನವಾಗಿರುವ ಗೀತೆಗಳ ಗಣಿಯೇ ತುಂಬಿದೆ. ಹಾಗೆಯೇ ಕೇವಲ ಮನರಂಜನೆಗಾಗಲೀ, ಮನೋವಿನೋದಕ್ಕಾಗಲಿ ನಿಲ್ಲುವಂತವುಗಳಲ್ಲಿ ಪ್ರೀತಿ, ತ್ಯಾಗ, ಮಾನವೀಯತೆ, ಬಂಡಾಯ, ಚಿಂತನ, ಮಂಥನ, ಕಲ್ಪನವಿಲಾಸ, ಸಾಹಸ ಹೀಗೆ ಹಲವಾರು ರೀತಿಯಲ್ಲಿ ಜನಪದಗೀತೆಗಳು ಜನರ ನಡುವಿನಿಂದ ಮೂಡಿಬಂದಿದೆ. ಒಂದುಕಾಲಕ್ಕೆ ಯಂತ್ರ ನಾಗರೀಕತೆಯಿಂದ ದೂರವಿದ್ದ ಸಮುದಾಯ ಪ್ರಕೃತಿಯನ್ನು, ದೇವತಾರಾಧನೆಯಲ್ಲಿ ತೊಡಗಿಕೊಂಡಿದ್ದಾಗ, ಭಕ್ತಿಯ ಭಾವುಕತೆಯಲ್ಲಿ ರಚನೆಯಾದ ಗೀತೆಗಳು ಯಾರೊಬ್ಬರ ಸ್ವತ್ತಾಗಿರಲಿಲ್ಲ. ಮತ್ತು ಸಮೂಹ ಸೃಷ್ಟಿಯೊಂದಿಗೆ ರಚನೆಯಾದ ಈ ಪದಗಳು ತಮ್ಮ ಸ್ವಂತವೆಂದಾಗಲೀ, ನನ್ನದು ಎಂಬ ಹಕ್ಕೂ ಸ್ವಾಮ್ಯವಾಗಲೀ ಯಾರಿಗೂ ಇರುವುದಿಲ್ಲ. ಹಾಗಾಗಿ ಭೂತದಲ್ಲಿ ಸೃಷ್ಟಿಯಾದ ಈ ಸಾಹಿತ್ಯ ರಚನೆಗಳು ವರ್ತಮಾನದೊಂದಿಗೆ ಮುಖಾಮುಖಿಯಾಗುತ್ತಾ ಆಧುನಿಕತೆಯ ಭರದಲ್ಲಿಯೂ ಜನಪದಗೀತೆ ತಮ್ಮ ಸತ್ವವನ್ನು ಕಳೆದುಕೊಂಡಿಲ್ಲ.

ಹತ್ತೊಂಬತ್ತನೆಯ ಶತಮಾನದ ಆದಿಯಿಂದಲೇ ಜಾನಪದ ಸಾಹಿತ್ಯದ ಅಧ್ಯಯನವನ್ನು ಇಂಗ್ಲೇಂಡಿನಲ್ಲಿ ಆರಂಭವಾದ ಮೇಲೆ ಅದು ಎಲ್ಲಾ ಕಡೆ ಶಿಸ್ತುಬದ್ಧವಾದ ಅಧ್ಯಯನದಲ್ಲಿ ತೊಡಗಿತು. ಮೌಖಿಕ ಪರಂಪರೆಯೇ ಪ್ರಧಾನವಾಗಿರುವ ಜಾನಪದ ಸಾಹಿತ್ಯದಲ್ಲಿ ಹಾಡಿಗೆ, ನಾದಕ್ಕೆ, ಕುಣಿಯುವ, ಸಂಗೀತದೊಂದಿಗೆ ಮೇಳೈಸುವ ಈ ಗೀತ ಪ್ರಕಾರವು ಸಂದೇಶಯುಕ್ತವಾಗಿಯೂ ವಿದ್ವಾಂಸರನ್ನು ಗಮನ ಸೆಳೆಯಿತು.

**ಜನಪದಗೀತೆ ಅರ್ಥವಿನ್ಯಾಸಗಳು** : ಕನ್ನಡದ ಸಂದರ್ಭದಲ್ಲಿ ಜನಪದಗೀತೆ (ಈಥುಇ ಖಾಟಿರ) ಜನಪದಕಾವ್ಯ (Folk Poetry), ಹಳ್ಳಿಯಿಂದ, ಹಳ್ಳಿಹಾಡು, ನಾಡಗೀತೆ, ಲೋಕಗೀತೆ, ಪಾಮರರಪದ ಹೀಗೆ ಹಲವು ಹೆಸರುಗಳಿಂದಲೂ ಕರೆಯುತ್ತಾರೆ. ಹೀಗೆ ಯಾವುದೇ ಹೆಸರಿನಿಂದಲೂ ಕರೆದರೂ ಅದು ಜನಪದಗೀತೆ ಎನ್ನುವುದು ತುಂಬಾ ಹೊಂದಿಕೆಯಾದುದು. ಅಲೆಕ್ಸಾಂಡರ್ ಎಚ್.ಕ್ರಾಪೆಯವರು ಹೇಳುವಂತೆ "ಜನಪದಗೀತೆ, ಸಂಗೀತಯುಕ್ತವಾದ ಭಾವಗೀತೆ ಇದರ ಕರ್ತೃ ಅಜ್ಞಾತ" ಶಿಷ್ಟ ಸಾಹಿತ್ಯದ ಭಾವಗೀತೆಗೆ ಇಂಬು ಕೊಡುವಂತೆ ಅದರ ಎಲ್ಲಾ ಮೂಲಮಟ್ಟುಗಳ ಕುರುಹು ಬಳಸಿಕೊಂಡು ಭಾವಗೀತೆ ರಚನೆಯಾಗಿರಬಹುದು. ಒಂದು ಭಾವಗೀತೆಯೊಳಗೆ ಜನಪದಗೀತೆಯಲ್ಲಿರುವ ನಾದಮಯತೆ, ಲಯ, ತಾಳಗೆಲ್ಲವು ಇರುತ್ತದೆ. ಶಿಷ್ಟ ಸಾಹಿತ್ಯವನ್ನು ಹೊಸ ಸಂಗೀತಸಂಯೋಜನೆಯೊಂದಿಗೆ ಶಾಸ್ತ್ರೀಯ ಸಂಗೀತದ ಜೊತೆಗೆ ಮೇಳೈಸಿದಾಗಲೂ ಆ ಸಂಗೀತದ ಪರಿಕರವೂ ಕೂಡ ಮೂಲ ಜನಪದರು ಸೃಷ್ಟಿ ಮಾಡಿದ ಸಂಗೀತ ಪರಿಕರಗಳ ಮುಂದುವರಿದ ಸಾಧನವಾಗಿರುತ್ತದೆನ್ನುವುದನ್ನು ಮರೆಯಬಾರದು.

ಜನಪದಗೀತೆಗಳು ತುಂಬಾ ಸರಳವಾದ ತ್ರಿಪದಿಗಳೊಂದಿಗೆ ಮನಸೆಳೆಯುತ್ತವೆ. ಸರ್ವಜ್ಞನ ವಚನಗಳಂತೆ ಲಲಿತ ಸರಳ ಶೈಲಿಯ ವಿದ್ವತ್ತನ್ನೂ, ಪಾಂಡಿತ್ಯವನ್ನೂ, ಎಲ್ಲೂ ತುಳುಕದ ಗೀತೆಗಳು ಸರಳ ರಚನೆಗಳಾಗಿದ್ದು ಪಾಮರರಿಗೂ ಅರ್ಥವಾಗಿ ಅದರ ಸಾಹಿತ್ಯದ ಸತ್ಯ ಅರ್ಥವಾಗಬೇಕೆನ್ನುವ ಅಭಿಲಾಷೆ ಇದ್ದಿದ್ದರಿಂದಾಗಿ ಯಾವುದೇ ಕಾಠಿಣ್ಯವು ಇದರಲ್ಲಿ ಅಡಕವಾಗಿರುವುದಿಲ್ಲ. ಶ್ರಮದೊಂದಿಗೆ ಮೂಡಿಬಂದಿರುವ ಗೀತೆಗಳು ತಮ್ಮ ಶ್ರಮಕ್ಕೆ ವಿರಾಮದಾಯಕ ಶಕ್ತಿಯನ್ನೇ ತಂದುಕೊಳ್ಳಲು ತಮ್ಮ ಕಾಯ ಮತ್ತು ಕಾಯಕ ನಡುವೆ ಉತ್ಪತ್ತಿಯಾದ ಗೀತೆಗಳು ಒಂದೇ ಸಾರಿಗೆ ಸೃಷ್ಟಿಯಾದವುಗಳಲ್ಲ. ಸಂದರ್ಭ, ಘಟನೆಗಳು ಗೀತೆಯು ಹುಟ್ಟುವಂತೆ ಪ್ರೇರೇಪಿಸಿರಬಹುದು.

'ಕುರಿತೋದದೆಯಂ ಕಾವ್ಯ ಪ್ರಯೋಗ ಪರಿಣತಮತಿಗಳ್' ಎನ್ನುವ ಕವಿಯ ಆಲೋಚನೆ ಎಲ್ಲಾ ಸಾಹಿತ್ಯಕ್ಕೂ ಅನ್ವಯಿಸಬಹುದು. ಪ್ರತಿಭೆ ಅನ್ನುವುದು ಅದು ವಿದ್ಯಾವಂತರ ಸ್ವತ್ತಾಗುಳಿಯದೇ ಓದು ಬರಹ ಬಾರದ ಅಂದಿನ ನಿರಕ್ಷರಕುಕ್ಷಿಗಳು ತಮ್ಮ ಇಷ್ಟಾನುಸಾರ ಕಟ್ಟಿದ ಸಾಹಿತ್ಯವನ್ನು ಇಂದಿಗೂ ನಾವು ಅಭ್ಯಸಿಸುತ್ತೇವೆಂದರೆ ಅದು ಅದರ ಗಟ್ಟಿತನದಿಂದಾಗಿಯೇ, ಭೂತಕಾಲದಲ್ಲಿ ರಚನೆಯಾದ ಸಾಹಿತ್ಯವು ವರ್ತಮಾನಕ್ಕೆ ಹೇಗೆ ಅನ್ವಯವಾಗುತ್ತದೆ ಎಂಬುದು ಪ್ರಶ್ನೆ. ಯಾವುದೇ ಸಾಹಿತ್ಯಕೃತಿಗಳು, ಗೀತೆಗಳು, ಕವಿತೆಗಳು, ಒಂದು ಕಾಲದಲ್ಲಿ ರಚನೆಯಾದರೂ ಅದು ತನ್ನ ಅರ್ಥಸ್ಫುರಣೆಯಿಂದ ಮುಂದಿನ ಗುರಿಯನ್ನು ಉದ್ದೇಶವನ್ನು ಹೇಳುವಂತೆಯೂ, ಅಥವಾ ಮುಂದೆ ನಡೆಯಬಹುದಾದ ಕಾಲಜ್ಞಾನವನ್ನು ಹೇಳಿದಾಗ ಅದು ಭವಿಷ್ಯವಾಗಿ ನಿಲ್ಲುವುದಿಲ್ಲ. ಕಾಲವು ಪ್ರಕೃತಿಯ ವಿಜ್ಞಾನಗಳೊಂದಿಗೆ ಜೀವನಕ್ರಮಗಳು ಬದಲಾದಂತೆ ವಿಜ್ಞಾನದ ಆವಿಷ್ಕಾರಗಳು, ಯಂತ್ರಚಾಲಿತವಾದಂತೆಲ್ಲ ಅದು ಶ್ರಮಕ್ಕೆ ಬೆವರು ಕೊಡದೇ ಬೆವರಿನ ಜಾಗದಲ್ಲಿ ಶ್ರಮವನ್ನೇ ಅಳೆಯುವ ಮಾನದಂಡದಿಂದಲೇ ಅದಕ್ಕೆ ತಕ್ಕ ಹಾಗೆ ಹಣದ ಮೂಲಕ ಶ್ರಮಕ್ಕೆ ಒಂದು ಪ್ರತಿಫಲ ಸಿಗುತ್ತದೆ. ಗೀತೆಗಳು ಹುಟ್ಟಿದ ಕಾಲದಲ್ಲಿ ಶ್ರಮವು ಆದಾಯಜನ್ಯವಾಗಿರದೇ, ಅದು ಸೇವಾಮನೋಭಾವ ಎಂಬ ಕರುಣೆಯ ಸ್ವರೂಪವನ್ನು ಪಡೆದದ್ದರಿಂದ ಇಂತಹ ಶ್ರಮಸಂಸ್ಕೃತಿಯ ಗೀತೆ ಹುಟ್ಟಲು ಸಾಧ್ಯವಾಯಿತು.

ಜನಪದಗೀತೆಯಲ್ಲಿ ಹೆಂಗಸರ ಹಾಡುಗಳು, ಗಂಡಸರ ಹಾಡುಗಳು, ಕೃಷಿಗೆ ಸಂಬಂಧಿಸಿದ ಗೀತೆಗಳು, ಹೀಗೆ ಅಧ್ಯಯನದ ಅನುಕೂಲಕ್ಕಾಗಿ ಹಲವಾರು ರೀತಿಯಲ್ಲಿ ವರ್ಗೀಕರಣ ಮಾಡಬಹುದು. ಮಾಡಿಯೂ ಇದ್ದಾರೆ. ಇದನ್ನು ಅಷ್ಟಕ್ಕೆ ನಿಲ್ಲಬಾರದು. ಜನಪದಗೀತೆಗಳಿಗೆ ಒಂದು ಕ್ರಿಯಾತ್ಮಕ ಸಂಗತಿ ಇರುತ್ತದೆ. ಮತ್ತು ಸಂದೇಶವಿರುತ್ತದೆ. ಈ ಶಕ್ತಿಯುತ ಗೀತೆಯ ಜೊತೆಗೆ ಸಂಗೀತದ ಲಯಗಳಿದ್ದರಂತೂ ಇದರ ಮುಂದೆ ಕವಿ ಬರೆದಗೀತೆಗಳು ಸಪ್ಪೆಯಾಗಿ ಕಾಣುತ್ತವೆ.

**ಗೀತೆಗಳು ಸಾರ್ವಕಾಲಿಕ:** ಆಧುನಿಕತೆಯಿಂದ ದೂರವಿದ್ದ ಕಾಲದಲ್ಲಿ ಶುದ್ಧಹಳ್ಳಿಯಲ್ಲಿ ಮೂಡಿಬಂದ ಈ ಗೀತೆ ಪ್ರಕಾರವು ಬರಬರುತ್ತಾ ವಿಜ್ಞಾನದ ವಿಸ್ಮಯಗಳು ಹಳ್ಳಿಗಳಿಗೂ ದಾಪುಗಾಲಿಟ್ಟವು. ಹಾಗೆಂದು ವಿಜ್ಞಾನಕ್ಕೆ ವಿರೋಧಿಯಲ್ಲ. ಈ ಜನಪದ ಗೀತೆಗಳು, ಸಂಸ್ಕೃತಿ, ಕಾಲಧರ್ಮವನ್ನೇ ಆಚರಣೆಯೊಂದಿಗೆ ವಿವೇಕ ಮತ್ತು ಬುದ್ಧಿಯನ್ನೇ ಹೇಳುವಂತವುಗಳಾಗಿದ್ದವು.

ಆಚಾರಕ್ಕರಸಾಗು ನೀತಿಗೆ ಪ್ರಭುವಾಗು
ಮಾತಿನಲಿ ಚೂಡಾಮಣಿಯಾಗು ನನ್ನ ಕಂದ
ಜ್ಯೋತಿಯೇ ಆಗು ಜಗಕ್ಕೆಲ್ಲ

ನಾಲ್ಕು ಗೋಡೆಗಳ ಮಧ್ಯೆ ಕಲಿಯುವುದು ಮಾತ್ರ ಶಿಕ್ಷಣ ಎಂದು ಭಾವಿಸಿದ ಇವತ್ತಿನ ಶಿಕ್ಷಣ ಉದ್ಯಮ ಸ್ವರೂಪವನ್ನು ಪಡೆದಿದೆ. ಆದರೆ ಬದುಕು, ನಡತೆ, ವಿಸ್ತಾರವಾದ ಸೇವಾ ಮನೋಭಾವ ಚುರುಕು ಬುದ್ಧಿಯ ವಿವೇಕವಂತನಾಗಬೇಕೆಂದು ತಾಯಿ ತನ್ನ ಮಗುವಿಗೆ ತೊಟ್ಟಿಲಲ್ಲಿ ಮಗುವಿಟ್ಟುಕೊಂಡು ಹೇಳುವ ಮಾತು ಹಳೆಯದೆಂದೆನಿಸುವುದಿಲ್ಲ. ನಮ್ಮನ್ನಾಳಿದ ರಾಜರ ಪರಂಪರೆಗೆ ಎಷ್ಟೇ ಯುದ್ಧದ ರಕ್ತಕಲೆಗಳು ಅಂಟಿಕೊಂಡರು ಹೆಣ್ಣು ಪ್ರಭುತ್ವದ ಪ್ರಜಾಕಲ್ಯಾಣವನ್ನು ಮತ್ತು ಜನಕಲ್ಯಾಣವನ್ನು ನೋಡಿದ್ದರಿಂದಾಗಿಯೂ ಪ್ರಜಾಪ್ರಭುತ್ವದ ಕಾಲದಲ್ಲಿದ್ದರೂ ಪ್ರಭುತ್ವದ ಮಾದರಿಯನ್ನು ನೆನಪು ಮಾಡಿಕೊಳ್ಳುವ ಪರಿ ಅನನ್ಯವಾದುದು. ಇಲ್ಲಿ ಅರಸ ಮಾದರಿಯಾಗಿದ್ದಾನೆ. ನೀತಿಗೆ ಪ್ರಭುವಿನಂತೆಯೇ ನಡೆದುಕೊಳ್ಳಬೇಕೆನ್ನುವ ತಾಯಿ ಬೇರ್‍ಯಾರನ್ನೂ ಉದಾಹರಿಸುವುದಿಲ್ಲ. ಪ್ರಭುತ್ವಕಾಲದಲ್ಲಿ ರಾಜನೇ ಪ್ರತ್ಯಕ್ಷ ದೇವತೆಯಾದ್ದರಿಂದ ಎಲ್ಲವೂ ಅವನೇ ಆಗಿರುತ್ತಾನೆ. ಪ್ರಶ್ನಿಸದೇ ಒಪ್ಪಬೇಕಾದ್ದರಿಂದ ಇಂತಹ ಒಂದು ವಿನೀತಭಾವನೆಯ ಭೀತಿ ಹುಟ್ಟಿಸಿರಬಹುದಾ ಅಂತಲೂ ಯೋಚಿಸಬಹುದು. ಆದರೂ ತಾಯಿ ತನ್ನ ಮಗುವಿಗೆ 'ಅರಸನಂತಾಗು' ಎನ್ನುವಲ್ಲಿ ರಾಜನೇ ಆಗು ಎಂದಲ್ಲ. ಕ್ಷತ್ರಿಯ, ಪ್ರಜಾಕಲ್ಯಾಣ, ಜನೋದ್ಧಾರಕ ಕಲ್ಪನೆಯಿಂದ ಅರಸನಂತಾಗು ಎಂದು ಹೇಳಿರುವುದು ಗಮನಿಸಬೇಕಾಗುತ್ತದೆ. ಇಡೀ ಜನಪದ ತ್ರಿಪದಿ ನೀತಿ ಸಾರವಾಗಿ ಕಂಡರೂ ಇಡೀ ಬದುಕಿಗೆ ಅನ್ವಯಿಸಿ ಹೇಳಬಯಸಿದಂತಿದೆ. ಬದುಕೆಂಬ ಮ್ಯಾನೇಜ್‌ಮೆಂಟ್ ಒಳಗೆ ಏನೆಲ್ಲ ಒಳಿತು ಕಾಣಬಯಸಬಹುದೋ ಅದನ್ನು ತಾಯಿ ಹೇಳಿದ ಪರಿ ವಿಶಿಷ್ಟವಾದುದು. ಕತ್ತಲದೂರ ಮಾಡುವ ಜ್ಯೋತಿ ತನ್ನನ್ನೇ ಸುಟ್ಟುಕೊಂಡು ಬೆಳಕು ಕೊಡುವ ತ್ಯಾಗದ ಪ್ರೀತಿಯೂ ಅಡಗಿದೆ. ನನ್ನ ಮತ್ತು ನನ್ನದು ಎಂಬುದು ಇಲ್ಲಿ ಸ್ವಾರ್ಥಲಾಲಸೆಯನ್ನು ಬಿಟ್ಟು ಲೋಕ ಕಲ್ಯಾಣವನ್ನು ಮಾಡಬಯಸುವಂತಾಗು ಎಂಬ ಮಾತಿನಲ್ಲಿ ಎಲ್ಲ ಕಾಲಕ್ಕೂ ಈ ತರಹದ ಬುದ್ಧಿ ಭಾವದ ಪ್ರಧಾನ ಗೀತೆಗಳು ಹಳೆಯದಾದರೂ ಹೊಸ ಮೌಲ್ಯವನ್ನು ಬಿತ್ತುವಲ್ಲಿ ಸಹಕಾರಿಯಾಗುತ್ತದೆ. ಘೋಷವಾಕ್ಯದಂತೆಯೂ ಭಾವಿಸಿದರೆ ತಪ್ಪೇನಿಲ್ಲ.

ಭೂಮಿತತ್ವದ ಮತ್ತು ವಿಶ್ವತತ್ವದ ಹಿನ್ನೆಲೆಯಲ್ಲಿ ಮೂಡಿಬಂದಿರುವ ಹಲವು ಗೀತೆಗಳು ಭೂಮಿಗೆ ಭಕ್ತಿಯಿಂದ ನಮಿಸುವ, ಕೃತಜ್ಞತಾಭಾವದಲ್ಲಿ ಕಾಣಬಯಸುವ ಪ್ರಾರ್ಥನೆ ಎಂತಾದರೂ ಅದು ಯಾವ ದೇವರನ್ನು ನೆನೆಯುವುದಿಲ್ಲ. ಭೂಮಿ ಮತ್ತು ಆಕಾಶಗಳ ಸಂಬಂಧಗಳ ನಡುವೆ ಮನುಷ್ಯರಾದ ನಾವು ಬದುಕು ಕಟ್ಟಿಕೊಂಡಿರುವುದು ಸರಿಯಷ್ಟೇ. ನಾವು ಯಾರಿಗೆ ಕೃತಜ್ಞತೆ ಪಡಬೇಕು, ಯಾರಿಂದ, ಎನ್ನುವುದು

ಏಳುತಲೆ ಎದ್ದು ಯಾರ್‍ಯಾರ ನೆನೆಯಲಿ
ಎಳ್ಳುಜೀರಿಗೆ ಬೆಳೆಯೊಳಾ ಭೂಮಿತಾಯಿ
ಎದ್ದೊಂದು ಗಳಿಗೆ ನೆನೆದೇನು

ನೆನಪು ಬೆಳಗಿನ ಹೊತ್ತು ಪೂಜ್ಯನೀಯ ಭಾವದಲ್ಲಿ ಕಾಣಬೇಕಾಗಿರುವುದನ್ನು ಕಾಣಬಹುದು. ಭೂಮಿತಾಯಿಯ ತಾಯ್ತನಕ್ಕೆ ಮತ್ತು ಅದು ಕೊಡುವ ಫಲವಂತಿಕೆಗೆ ನಾನು ನನ್ನ ಮನ ಎಳೆಯುತ್ತಿದೆ ಎನ್ನುವ ಕೃತಜ್ಞತಾ ಭಾವದೊಳಗೆ ಸ್ಮರಿಸಬೇಕಾಗಿದೆ. ಇಂದು ಭೂಮಿಯ ಮೇಲೆ ನಿರಂತರ ಅತ್ಯಾಚಾರ ನಡೆಯುತ್ತಾ, ಭೂಮಿಯನ್ನು ತಮ್ಮ ಸ್ವಾರ್ಥಕ್ಕೆ

ಬಳಸಿಕೊಂಡು ಹಣದ ಆರ್ಭಟ ಮೇಲಾಗುತ್ತಿದೆ. ನಮ್ಮದಲ್ಲದ ಭೂಮಿ, ಆಕಾಶ, ನೀರು, ಗಾಳಿ ಎಲ್ಲವೂ ಯಾರೊಬ್ಬರ ಸ್ವತ್ತಾಗಿ ಉಳ್ಳವರು ಅದರ ಮೇಲೆ ಅಧಿಕಾರ ಚಲಾಯಿಸುತ್ತಿದ್ದಾರೆ. ಕೃಷಿ, ಪಶುಪಾಲನೆ ಆರಂಭವಾದ ದಿನಗಳಲ್ಲಿ ಹೆಣ್ಣು ತನ್ನ ಶಕ್ತಿವರ್ಧಕತೆಗೆ ಬೇಕಾದ ಧಾನ್ಯದ ಮಹಿಮೆಯ ಮುಂದೆ ನಾನು ಚಿಕ್ಕವಳು ಎಂಬ ಹಿಂಜರಿಕೆಯೂ ಇದ್ದಂತಿದೆ.

ನಾಲಗೆಯ ಮೇಲೆ ನಲಿದಾಡುತ್ತಿದ್ದ ಗೀತೆಗಳು ಇಂದು ವಿಜ್ಞಾನದ ವೇಗದೊಳಗೆ ಬಹು ಮಾಧ್ಯಮದಲ್ಲಿ ರಿಂಗಣಿಸುತ್ತಿರುವುದು ನಿಜ. ಮೌಖಿಕವೇ ಪ್ರಧಾನವಾಗಿದ್ದ ಆ ಕಾಲದಲ್ಲಿ ಇಂದಿಗೂ ಜನಪದಗೀತೆಗಳನ್ನು ಹಾಡುವವರು ಅದನ್ನು ಉಳಿಸಿ ಬೆಳೆಸುವವರು ಅಲ್ಲಲ್ಲಿ ಗೋಚರವಾಗುತ್ತಿರುವುದು ಗಮನಿಸಬೇಕಾದ ಸಂಗತಿ. ಮೀಡಿಯಾಗಳ ಅಬ್ಬರದಿಂದಾಗಿ ಇನ್ನೇನು ನಶಿಸಿ ಹೋಗುತ್ತವೆ ಎಂಬ ಆತಂಕಗಳು ಇರುವುದು ಸಹಜ. ಜಾನಪದ ವಿದ್ವಾಂಸರು ಅಭಿಪ್ರಾಯ ಪಡುವಂತೆ ಎಲ್ಲಿಯವರೆಗೂ ಕೃಷಿ, ಸಂಗೋಪನೆ, ಪಶುಪಾಲನೆ, ಈ ದೇಶದಲ್ಲಿ ಮುಂದುವರಿಯುತ್ತದೋ ಅಲ್ಲಿಯವರೆಗೂ ಜಾನಪದ ಸಾಹಿತ್ಯ ಮರೆಯಾಗುವುದಿಲ್ಲ. ವಿಶ್ವವಿದ್ಯಾಲಯದಲ್ಲಿ ಶೈಕ್ಷಣಿಕವಲಯದ ಶಿಸ್ತು ಅಧ್ಯಯನವಾಗಿರುವುದರಿಂದ ಇದರ ಅಧ್ಯಯನಕ್ಕೇನು ಕೊರತೆಯಾಗದು ಎಂದು ಡಾ.ಮೀರಾಸಾಬಿಹಳ್ಳಿ ಶಿವಣ್ಣ ಅಭಿಪ್ರಾಯ ಪಡುತ್ತಾರೆ.

**ಅಪಾರ ಸಂಗ್ರಹ :** ಈಗಾಗಲೇ ಸಾವಿರಾರು ಗೀತೆಗಳು ಪುಸ್ತಕರೂಪದಲ್ಲಿ, ಧ್ವನಿಮುದ್ರಿಕೆಗಳ ರೂಪದಲ್ಲಿ ಜನಗಳನ್ನು ತಲುಪುತ್ತಿದೆ. ಬೇರೆ ಬೇರೆ ಬಹು ಆಕರ್ಷಣೀಯ ಮಾಧ್ಯಮವಾದ ಸಿನಿಮಾ ಧಾರವಾಹಿ, ಅಂತರ್ಜಾಲ, ವಾಟ್ಸಾಪ್, ಫೇಸ್ ಬುಕ್, ಅಂತಹ ನವೀನ ಮಾಧ್ಯಮಗಳಲ್ಲಿಯೂ ಜನಪದಗೀತೆಗಳನ್ನು ಕೇಳುವ ಪರಿಪಾಟ ಬೆಳೆಯುತ್ತಿದೆ. ಹಳ್ಳಿಯಲ್ಲಿ ಮಾತನಾಡುವ ಶೈಲಿ, ರೇಷ್ಮೆತೋಟದಲ್ಲಿ ಸೊಪ್ಪು ಕೀಳುತ್ತಿದ್ದ ಮುದುಕಿಯೊಬ್ಬಳು ತನ್ನ ಒಂಟಿತನ, ಬೇಸರಿಕೆ ಕಳೆಯಲೆಂದು ಜನಪದಗೀತೆಗಳನ್ನು ಹಾಡುತ್ತಿದ್ದುದನ್ನು ನಾನು ಕಂಡಿದ್ದೇನೆ. ಪ್ರಾಥಮಿಕ ಹಂತದಿಂದ ಹಿಡಿದು ಉನ್ನತಶಿಕ್ಷಣದವರೆಗೆ ಗೀತೆಗಳ ಪ್ರಸಾರವಾಗುತ್ತಿವೆ. ಪ್ರೀನರ್ಸರಿ, ಪ್ಲೇಹೋಂಗಳಲ್ಲಿ ಬಾಲ್ಯದಲ್ಲಿಯೇ ಸಣ್ಣ ಮಗುವಿಗೆ ಪ್ರಾಸಗಳನ್ನು ಬಾಯಿ ಪಾಠ ಮಾಡಿಸಬೇಕಾಗಿದೆ. ಇಂಗ್ಲೀಷಿನ ರೈಮಿಂಗ್ಸ್ ಪದಗಳನ್ನು ಬಾಯಿ ಪಾಠ ಮಾಡುವಂತೆ ಜನಪದ ತ್ರಿಪದಗಳನ್ನು ಬಾಯಿಪಾಠ ಮಾಡಿಸಬೇಕಾದುದು ಇಂದಿನ ಅಗತ್ಯವಾಗಿದೆ. ಫೇಸ್ ಬುಕ್‌ನಲ್ಲಿ ಹರಿದಾಡುವ ಜನಪದ ಒಗಟು, ಜನಪದ ಗಾದೆಗಳು, ಇಂದು ಯೂ ಟ್ಯೂಬ್‌ನಲ್ಲಿ ಹೇರಳವಾಗಿ ಸಿಗುತ್ತಿರುವುದು ನಮ್ಮ ಬೆಳವಣಿಗೆಯ ಸಂಕೇತದ ಜೊತೆಗೆ ಮಾಧ್ಯಮಗಳು ಸಹ ಹೆಚ್ಚಿನ ಪ್ರಮಾಣದಲ್ಲಿ ಉಪಯೋಗಿಸಿ ಮೌಲ್ಯಯುತ ಮನರಂಜನೆಯನ್ನು ಕೊಡಬೇಕಾಗಿದೆ.

ಹಳೆಯ ಸಿನಿಮಾಗಳಲ್ಲಿ ಜನಪದ ಮಟ್ಟು, ಗೀತೆಗಳನ್ನು ಬಳಸಿಕೊಂಡು ಹಲವಾರು ಸಿನಿಮಾಗಳು ಯಶಸ್ವಿಯಾಗಿದೆ. ಈಗಲೂ ಪೂರ್ಣ ಪ್ರಮಾಣದಲ್ಲಿ ಗೀತೆಯನ್ನು ಬಳಸಿಕೊಳ್ಳುವ ಪ್ರಯತ್ನವನ್ನು ಮಾಡುತ್ತಾರೆ. ಕೆಲವರು ಅದಕ್ಕೆ ಮಸಾಲೆ ಸೇರಿಸಿ ತಮ್ಮದು ಎಂದು ಬಿಂಬಿಸಿಕೊಳ್ಳುತ್ತಿದ್ದಾರೆ. ಇದನ್ನೇ ಸಾರ್ವಜನಿಕರು ಪ್ರಶ್ನಿಸಬೇಕಾಗಿದೆ. ಅಪಾರವಾಗಿ ಸಂಗ್ರಹವಾಗಿರುವ ಜನಪದ ಗೀತೆಗಳನ್ನು ಬೆಳೆಸಬೇಕಾದ ಅಗತ್ಯ, ಯುವಜನತೆಯ ಬುದ್ಧಿಭಾವಕ್ಕೆ ಇದಕ್ಕೆ ಈ ಸಾಹಿತ್ಯದ ಅಭಿರುಚಿಯನ್ನು ಮುಟ್ಟಿಸುವ ಕೆಲಸವನ್ನು ಸಮರ್ಥವಾಗಿ ಮಾಡಬೇಕು. ತಂತ್ರಜ್ಞಾನದ ಬಳಕೆಯಿಂದಾಗಿ ಅಂದಿಗಿಂತಲೂ ಇಂದು ಹೆಚ್ಚು ಜನರನ್ನು ತಲುಪಲು ಸಾಧ್ಯವಾಗಿದೆ. ಮೌಖಿಕತೆಯನ್ನು ಮೀರಿ ಜನಮುಖಿಯಾಗುವತ್ತ ನಮ್ಮ ಶಿಕ್ಷಣ ಪಠ್ಯಗಳು ರೂಪುಗೊಳ್ಳಬೇಕಿದೆ.

**ನಕಲಿ ಜನಪದ ಗೀತೆಗಳ ಹಾವಳಿ :** ಒಂದು ಗೀತೆ ವಾಣಿಜ್ಯೀಕರಣಗೊಂಡ ಮೇಲೆ, ಸಂಗೀತಗಾರರು, ಸಂಗೀತ ನಿರ್ದೇಶಕರು ಅಗ್ಗದ ಸಾಹಿತ್ಯ ರಚನೆ ಮಾಡಿ ಜನಪದಗೀತೆಗಳ 'ಮಟ್ಟು'ಗಳನ್ನು ಕದ್ದು ನಕಲಿ ಹಾಡುಗಳು ವಿಜೃಂಭಿಸುತ್ತಿರುವುದು ಮೂಲ ಜನಪದಗೀತೆಗಳಿಗೆ ಹಿನ್ನಡೆಯಾಗಿರುವುದು ಸತ್ಯ. ಸಮುದಾಯ ಅರ್ಥವಂತಿಕೆಗೆ, ಸಾಹಿತ್ಯಕ್ಕೆ ಮನ್ನಣೆ ಕೊಡಬೇಕೇ ಹೊರತು, ವಿಜೃಂಭಿಸುವ ಸಂಗೀತಕ್ಕಲ್ಲ. ಸಂಗೀತವಿದ್ದರೂ ಸಾಹಿತ್ಯದ ಹಿನ್ನೆಲೆಯಾಗಿಯೇ ಸಂಗೀತವಿರಬೇಕು. ಉತ್ತರ ಕರ್ನಾಟಕ ಭಾಗದಲ್ಲಿ ಅಪಾರವಾದ ಭಾಗವಂತಿಕೆ, ಚೌಡಿಕೆ ಪದಗಳು, ಲಾವಣಿಗಳು ಅಪಾರವಾಗಿವೆ. ಹಾಡುವ ಕಲಾವಿದರು ಇದ್ದಾರೆ. ಅದರ ಜೊತೆಗೆ ನಕಲಿ ಹಾಡುಗಳ ಸರದಾರರೂ ಹುಸಿ ಜನಪದಗೀತೆಗಳೆಂದು ಹಾಡಿ ನಂಬಿಸುತ್ತಿದ್ದಾರೆ. ಇದು ಪೀಳಿಗೆಯ ದೃಷ್ಟಿಯಿಂದ ತುಂಬಾ ಅಪಾಯಕಾರಿಯಾದುದು. ಅಕಾಡೆಮಿಗಳು ಇಂತಹದ್ದನ್ನು ತಡೆಗಟ್ಟಬಹುದಾದ ಉಪಾಯಗಳನ್ನು ಕಂಡು ಹಿಡಿಯಬೇಕು. ಇದಕ್ಕೂ ಮೊದಲಾಗಿ ಯುವಜನತೆಗೆ ನಕಲಿ, ಅಸಲಿ ಯಾವುದು ಎಂಬುದನ್ನೇ ಮನವರಿಕೆ ಮಾಡಿಕೊಡಬೇಕು. ಆಗ ಪತ್ತೆಹಚ್ಚಲು ಸುಲಭವಾಗಬಹುದು. ಆ ಕ್ಷಣದ ಮನರಂಜನೆಗೋಸ್ಕರ ದ್ವಂದ್ವಾರ್ಥ ಬರುವ ಹಾಡುಗಳು ಅಫೀಮಿನಂತೆ ಸೆಳೆಯುತ್ತಾ ಶುದ್ಧ ಗೀತೆಯ ಅಭಿರುಚಿಯನ್ನು ಕೆಡಿಸಲು ಪ್ರೇರೇಪಿಸುತ್ತದೆ.

ಜನಪದ ಲೋಕದಂತಹ ಟ್ರಸ್ಟ್‌ಗಳನ್ನು ಜಿಲ್ಲೆಗೊಂದರಂತೆಯೂ ಕಟ್ಟಿ ಬೆಳೆಸಿದರೆ ನಿರಂತರವಾಗಿ ಕಲಿಕೆ ಶಿಬಿರ, ಕಮ್ಮಟ ಅದರ ವಸ್ತು ಪಾವಿತ್ರ್ಯತೆಯನ್ನು ಮುಂದಿನ ತಲೆಮಾರಿಗೆ ತಲುಪಿಸಲು 'ಲೋಕಗಳು' ಶ್ರಮಿಸುವ ಅಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ ಎಚ್.ಎಲ್.ನಾಗೇಗೌಡರ ಅಪಾರವಾದ ತಿಳುವಳಿಕೆ ಲೋಕ ಇಷ್ಟೊಂದು ಕ್ರಿಯಾಶೀಲವಾಗಿ ಕೆಲಸ ಮಾಡಲು ಸಾಧ್ಯವಾಯಿತೆಂದರೆ ಜನಪದಕ್ಕೆ ಸಾವಿಲ್ಲವೆಂದೇ ಹೇಳಬೇಕು.

**ಜನಪದಗೀತೆ ಮತ್ತು ನವಮಾಧ್ಯಮಗಳು :** ಆಕಾಶವಾಣಿಯಲ್ಲಿ ಈಗಲೂ ಹಳ್ಳಿಯ ಕಲಾವಿದರಿಂದ ಮೂಲಧಾಟಿಯಲ್ಲಿಯೇ ಜನಪದ ಗೀತೆಗಳನ್ನು ಹಾಡಿಸಿ ಅವರಿಗೆ ಸೂಕ್ತವಾದ ಗೌರವ ಕೊಡುತ್ತಿರುವುದು ಹೆಮ್ಮೆಯ ವಿಷಯ. ಶ್ರೋತೃವರ್ಗದವರಿಗೆ ಮಾತ್ರ ಮೀಸಲಾದ ಆಕಾಶವಾಣಿ ಇಂದಿಗೂ ತನ್ನ ಸೀಮಿತ ಕೇಳುಗರನ್ನು ಕಡಿಮೆ ಮಾಡಿಕೊಂಡಿಲ್ಲ. ದೃಶ್ಯಮಾಧ್ಯಮಗಳಲ್ಲಿ ಸ್ಪರ್ಧೆಯೊಡ್ಡುವ ಗೀತಲಹರಿಗಳು ಸಂಗೀತದೊಂದಿಗೆ ವಿಜೃಂಭಿಸಿ ಮರೆಯಾಗುತ್ತವೆ. ಬಹುಮಾನ ಪಡೆದ ಗಾಯಕರು, ಅದನ್ನು ಉಳಿಸುವ ಬೆಳೆಸುವ ಬದ್ಧತೆಯನ್ನು ಪ್ರದರ್ಶಿಸಬೇಕು. ಬಾಳಪ್ಪಹುಕ್ಕೇರಿ, ಸೋಬಾನೆ ಚಿಕ್ಕಮ್ಮ, ಪಿ.ಕಾಳಿಂಗರಾಯರು, ಬಾನಂದೂರು ಕೆಂಪಯ್ಯ, ದರೋಜಿ ಈರಮ್ಮ, ಅಪ್ಪಗೆರೆ ತಿಮ್ಮರಾಜು, ತಂಬೂರಿ ರಾಜಮ್ಮ, ಸುಕ್ರಿಬೊಮ್ಮಗೌಡರಂತೆಯೇ ಒಂದು ಪರಂಪರೆಗೆ ತಲುಪಿಸುವ ಜವಾಬ್ದಾರಿಯನ್ನು ಇಂದು ತೆಗೆದುಕೊಳ್ಳಲು ನಮ್ಮ ಗಾಯಕರು ಕಷ್ಟ ಪಡಬೇಕಾಗಿದೆ.

ಬಹು ಅರ್ಥವಿನ್ಯಾಸಗಳನ್ನು ಹುದುಗಿಸಿಕೊಂಡಿರುವ ಜನಪದಗೀತೆಗಳು ಮನುಷ್ಯನ ಹುಟ್ಟು ಸಾವುಗಳನ್ನು ಪ್ರೀತಿಯಿಂದಲೇ ಪ್ರಶ್ನಿಸುವ, ಸ್ವಾತಂತ್ರ್ಯ ಮತ್ತು ಒಲವು ಬಹುಶಃ ಇದರಲ್ಲಿ ಮಾತ್ರ ಇರಲಿಕ್ಕೆ ಸಾಧ್ಯ.

ಬಡವರು ಸತ್ತರೆ ಸುಡಲಿಕ್ಕೆ
ಸೌದಿಲ್ಲ ಒಡಲ ಬೆಂಕೀಲಿ ಹೆಣಬೆಂದೋ
ಶಿವನೆ ಬಡವರಿಗೆ ಸಾವ ಕೊಡಬ್ಯಾಡ

ಎಂಬ ಕಠೋರವಾದ ಬಂಡಾಯ ಗೀತೆಗಳು ಬದುಕು ಎಷ್ಟು ನಿಕೃಷ್ಟವಾದುದು ಎಂಬುದನ್ನು ಒತ್ತಿ ಹೇಳುತ್ತದೆ.

**ಜೀವನ ಮೌಲ್ಯದ ಸಂಕೇತ ಜನಪದಗೀತೆ** : ಸಾಮಾನ್ಯ ಜೀವನ, ಸೌಂದರ್ಯೋಪಾಸನೆ, ಒಲವು, ತಿಳಿವು, ನಿಗೂಢತೆ, ಭೀಬತ್ಸೆ, ಹಾಸ್ಯ, ವಿನೋದದತೆ, ಕಷ್ಟಕಾರ್ಪಣ್ಯ ಕೃತಕತೆ, ಶೋಕಿ, ಶಿಶುಸಂಸ್ಕಾರ, ದೈವ ಸಾಕ್ಷಾತ್ಕಾರದ ದರ್ಶನದ ಅರಿವು ಎಲ್ಲವೂ ಅಡಕವಾಗಿರುವ ಜನಪದಗೀತೆಗಳಲ್ಲಿ ಕೂಡಿಬಾಳುವ ಮನೋಧರ್ಮವನ್ನು ತಿಳಿಸಿಕೊಡುತ್ತದೆ. ಜಾತಿ, ಧರ್ಮ ಮೀರಿದ ಪ್ರಜ್ಞೆಯನ್ನು ಬೆಳಸುವಲ್ಲಿ ಜನಪದಗೀತೆಗಳಲ್ಲಿರುವ ಅರ್ಥ ಸಾಹಿತ್ಯ ಮನುಷ್ಯನ ಸ್ವಾವಲಂಭಿ ಬದುಕಿಗೆ ಹೆಚ್ಚು ಸಹಕಾರಿಯಾಗುತ್ತದೆ. ಶಿಕ್ಷಣದಿಂದ ದೂರ ಉಳಿದಿದ್ದ ಅಂದಿನ ಸಮುದಾಯ, ತಾವು ಕಟ್ಟುತ್ತಿದ್ದ ಗೀತೆಯೊಂದಿಗೆ ಬದುಕನ್ನು ಕಟ್ಟಿಕೊಳ್ಳುತ್ತಿದ್ದರು. ಅದರನ್ವಯ ಹಾಗೆಯೇ ಬದುಕಿದ್ದರಿಂದಲೇ ಜನಪದ ಬದುಕು ಹಸನಾಗಿತ್ತು. ಯಂತ್ರಚಾಲಿತದಿಂದ ದೂರ ಇದ್ದ ಅವರು ದೇಹ ದಂಡಿಸಿ ದುಡಿಮೆ ಮಾಡುತ್ತಿದ್ದುದರಿಂದ ಆರೋಗ್ಯದ ಕನವರಿಕೆ ಅಷ್ಟಾಗಿ ಕಾಣುತ್ತಿರಲಿಲ್ಲ.

ಎಮ್ಮ ದೇಶಕ್ಕಿಂತ ಹೆಚ್ಚಿನ ದೇವರಿಲ್ಲರಣ್ಣಾ
ನಮ್ಮ ದೇಶದ ಮಾನ ಕಾಯಿರಣ್ಣಾ

ಇಂತಹ ಗೀತೆಗಳೂ ಕೂಡ ಕುವೆಂಪು ಅವರ "ನೂರು ದೇವರನ್ನೆಲ್ಲ ನೂಕಾಚೆ ದೂರ" ಎಂಬ ಸಂಕುಚಿತತೆಯನ್ನು ದೂರವಾಗಿ ಭಾರತಾಂಬೆಯನ್ನೇ ಪೂಜಿಸುವಬಾರ ಎನ್ನುವ ಭ್ರಾತೃತ್ವವನ್ನು ಜನಪದರೂ ಕಂಡುಕೊಂಡಿದ್ದರು ಎಂಬ ವಿಷಯ ರಾಷ್ಟ್ರಪ್ರೇಮವನ್ನು ನೆನಪಿಸುತ್ತದೆ. ದೇಶದ ಅಭಿವೃದ್ಧಿ, ದೇಶ ಪ್ರೇಮ, ನನ್ನ ಪಾಲು ಎಷ್ಟೆಂಬುದನ್ನು ಒತ್ತಿ ಹೇಳುವ ಇಂತಹ ಸಾಲುಗಳು ಜನಪದಗೀತೆಗಳು ಕೂಡ ಒಂದು ಪ್ರಾದೇಶಿಕತೆಯನ್ನು ಮೀರಿ ಆಲೋಚಿಸುವ ಅಭಿವ್ಯಕ್ತಿಯಾಗಿ ಇಂದಿಗೂ ಉಳಿದಿದೆ.

ಲಂಚವ ಸುಲಿಯೋನು ಸೂಳೆಯ ಬಿಡದೋನು
ಹೆಂಡವ ಕುಡಿವೋನು ಅರಸಲ್ಲ ಲಂಡ
ನಾಡಿಗೆ ಕೇಡನೆ ತರುವೋನು

ಮನುಷ್ಯಾ ಹುಟ್ಟಿದಂದಿನಿಂದಲೇ ಆಸೆಯು ಅಪರಿಮಿತವಾದಾಗ ಲಂಚವು ಹುಟ್ಟಿರುವುದು ಸರ್ವೇಸಾಮಾನ್ಯ. ಲಂಚ ಕೇವಲ ಹಣ ಮಾತ್ರವಲ್ಲ ಮಾನಸಿಕವಾಗಿ ಲಂಚತ್ವವನ್ನೂ ಪಡೆಯುವುದು ಮಾಡಿದ ಉಪಕಾರ ಕರ್ತವ್ಯಗಳಗೆ ಹೆಚ್ಚುವರಿಯಾಗಿ ಬೇಡುವುದು ಮೊದಲಿನಿಂದಲೂ ಇದೆ. ಇದು ಅರಸರ ಕಾಲದಲ್ಲಿ ಇಲ್ಲವೆಂದು ನಾವು ಭಾವಿಸಬಾರದು. ಮದ್ಯದ ವ್ಯಸನಕ್ಕೆ, ಸೂಳೆಗೆ ದಾಸನಾದವನು ನಾಡಿಗೆ ಕೇಡನು ತರದೇ ಮತ್ತೇನು ತಂದಾನು ಎಂಬ ತಿಳುವಳಿಕೆಯ ಅನುಭವ ಜನ್ಯ ಎಲ್ಲ ಕಾಲಕ್ಕೂ ನೀತಿ ಬೋಧಕವಾಗಿದೆ. ಇಂದು ಕೂಡ ಸೂಳೆತನ ಮಾಡಿ, ದಿವಾಳಿಯಾಗಿ ಭಿಕಾರಿಯಾಗುತ್ತಿರುವುದನ್ನು ಅಂದೇ ಹೇಳಿರುವುದು ಇದು ನಿಜವಾಗುತ್ತಿದೆ.

ನಮ್ಮ ಶಿಷ್ಟಕವಿಗಳು ಅಪಾರವಾಗಿ ಜನಪದದ ಮಟ್ಟುಗಳನ್ನು ತಮ್ಮ ಕಾವ್ಯದಲ್ಲಿ ಬಳಸಿಕೊಂಡಿದ್ದರಿಂದ ಅವರ ಸಾಹಿತ್ಯ ಹೆಚ್ಚು ಜನಪ್ರಿಯವಾಗಲು ಸಹಕಾರಿಯಾಗಿದೆ. ಬೇಂದ್ರೆ, ಮಧುರಚನ್ನ, ಶಿಶುನಾಳಷರೀಫ, ಕಂಬಾರ ಅವರ ಭಾವಗೀತೆ, ಕವಿತೆಗಳಲ್ಲಿ ಕಾಣುವ ಜಾನಪದದ ಧಾಟಿಯ ಸತ್ವವನ್ನು ಮತ್ತು ಮುಂದುವರಿಸಿದ್ದಾರೆ. ಇಪ್ಪತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ಆರಂಭವಾದ ಸಂಗ್ರಹ ಕಾರ್ಯ ಇಂದಿಗೂ ಮುಂದುವರಿದಿದೆ. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ 1885ರಲ್ಲಿ ಫ್ಲೀಟ್‌ರೇ ಸಂಗ್ರಹಿಸಿದ ಕಾರ್ಯ ಮಹತ್ವವಾದುದು. ಕ್ಷೇತ್ರಕಾರ್ಯಗಳು, ಅಧ್ಯಯನಗಳು, ಸಂಶೋಧನೆಗಳು ಇಂದಿಗೂ ಮುಂದುವರಿಯುತ್ತಿರುವುದು ಪ್ರಶಂಸನೀಯವಾದ ಕೆಲಸವೇ. ಕೇಂದ್ರ ಸಾಹಿತ್ಯ ಅಕಾಡೆಮಿಯೂ ಸಹ ಜನಪದ ಸಾಹಿತ್ಯ ಸಂಕಲನಗಳನ್ನು ಪ್ರಕಾಶಿಸುತ್ತಿರುವುದನ್ನು ನೋಡಿದರೆ ಒಕ್ಕೂಟದ ಎಲ್ಲಾ ರಾಜ್ಯಗಳಲ್ಲು ಜಾನಪದ ಸಾಹಿತ್ಯದ ಅಭಿರುಚಿಯಂತೂ ಇರುವುದನ್ನು ಯಾರೂ ಅಲ್ಲಗಳೆಯಲಾರದು. ಮೊಗೆದಷ್ಟು ಅಕ್ಷಯವಾಗಿರುವ ಜನಪದ ಗೀತೆಗಳು ಇಂದಿಗೂ ಹೊಸರೂಪದ ಆಧುನಿಕ ಜಾನಪದವಾಗಿ ಮೂಡಿಬರುತ್ತಿರುವುದು ಬೆಳವಣಿಗೆಯೇ ಸರಿ. ಎಲ್ಲ ಸಾಹಿತ್ಯ ಪ್ರಕಾರಗಳು ಹೊಸದೇ ಆಗಿರುತ್ತದೆ. ಆಧುನಿಕವಾಗಿರುತ್ತದೆ. ಅದನ್ನು ವರ್ತಮಾನದಲ್ಲಿಟ್ಟು ಅನುಲಕ್ಷಿಸಿದಾಗ ಭಿನ್ನ ನೋಟಕ್ರಮಗಳು ಈ ಕಾಲದೊಂದಿಗೆ ಮುಖಾಮುಖಿಯಾಗಿ ಸಾಹಿತ್ಯದ ಮಾದರಿಯಾಗಿ ಕಂಗೊಳಿಸುವುದರಲ್ಲಿ ಜನಪದ ಗೀತೆ ಪ್ರಕಾರವು ಹಿಂದೆ ಬಿದ್ದಿಲ್ಲ.

**ಸಾಹಿತ್ಯಕ್ಕೆ ಪ್ರೇರಣೆಯಾಗಿ ಜನಪದಗೀತೆ** : ಅನುಭವ ಅಪಾರವಾದ ಓದು ಪ್ರತಿಭೆಗಳೆರಡೂ ಜೊತೆಯಲ್ಲಿದ್ದರೆ ನಾವು ಹಾಡುವ, ನೋಡಿದ, ಕೇಳಿದ ಗೀತೆಯೊಳಗೆ ಮರುಸೃಷ್ಟಿಯ ಹುಟ್ಟು ಬರಲು ಸಾಧ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ 'ಜನವಾಣಿ ಬೇರು, ಕವಿವಾಣಿ ಹೂ' ಎಂಬ ಮಾತು ನಿಜವಾಗಿದೆ. ಸಂಗೀತಗಾರರು, ಗೀತರಚನೆಗಾರರು, ನಾಟಕಕಾರರು, ಬಳಸುವ ತಮ್ಮ ಕೃತಿಗಳಲ್ಲಿ ಇದರ ಹುಟ್ಟನ್ನು ಕಾಣಬಹುದು. ಸ್ಫೂರ್ತಿಯ ಸೆಲೆಯಾಗಿ, ಬಿಡದೇ ಕಾಡುವ ಸುಳಿವಾಗಿ ಜನಪದಗೀತೆ ಬೆನ್ನತ್ತುತ್ತದೆ. ಕವಿಯೊಳಗೆ ಅಂತರ್ಗತವಾಗಿ ಹುದುಗಿರುವ ಜಾನಪದದ ಮಟ್ಟು ಅವನು ಬರೆದ ಭಾವಗೀತೆಗಳ ಮೇಲೆ ಪ್ರಭಾವ ಬೀರಿಯೇ ಬೀರುತ್ತದೆ.

**ಜನಪದಗೀತೆ ಮತ್ತು ಜಾಗತೀಕರಣ** : ವಿಶ್ವವೇ ಒಂದು ಮಾರುಕಟ್ಟೆಯಾಗಿ ಕೊಳ್ಳುವ ಸಂಸ್ಕೃತಿಯು ಕಂಪನಿಯ ಒಡೆತನದಲ್ಲಿರುವಾಗ ನಮ್ಮ ದೇಶಿ ನೈಜತೆಗಳೆಲ್ಲವೂ ನಶಿಸುವ ಆತಂಕದಲ್ಲಿರುವಾಗ ಈ ಹೊತ್ತಿನಲ್ಲಿ ನಡೆಯುವ ಹಬ್ಬ, ಹರಿದಿನಗಳು, ಜಾತ್ರೆಗಳು, ಯಕ್ಷಗಾನಗಳು, ನಾಟಕಗಳು, ಸಿನಿಮಾಗಳು ಇಂತಹ ಕಲೆಗಳನ್ನು ಹಿಮ್ಮೆಟಿಸಲು ಸಾಧ್ಯವಾಗಿಲ್ಲ. ಅಷ್ಟೇ ಅಲ್ಲ, ಎಷ್ಟೇ ಆಧುನಿಕ ಸಂಗೀತ ಪರಿಕರಗಳು ಬಂದಾಗ್ಯೂ 'ತಮಟೆ'ಯ ವಾದನಕ್ಕೆ ಇರುವ ಗತ್ತು ಗಮ್ಮತ್ತು ಇದ್ದೇ ಇರುತ್ತದೆ. ಹಾಗಾಗಿ ಜಾಗತೀಕರಣವನ್ನು ಎದುರಿಸುವಲ್ಲಿಯೂ ನಮ್ಮ ಮೂಲಜನಪದ ಗೀತೆಗಳು ಸವಾಲನ್ನು ಸ್ವೀಕರಿಸಿವೆ. ನಮಗೆ ಬೇಕಾದ ಆನಂದ, ನೆಮ್ಮದಿಯನ್ನು ಪರ್ಯಾಯವಾಗಿ ಕಂಪನಿಗಳು ಕೊಡುತ್ತವೆಂದಾದರೂ, ಕಲೆ ಸಂಗೀತದಂತಹ ಮಾಧ್ಯಮಗಳಲ್ಲೂ ಆಯಾಯ ಕಲೆಗೆ, ವಾದ್ಯಗಳಿಗೆ ಸೀಮಿತವಾದ ಅಭಿರುಚಿ ಮತ್ತು ಅವಕಾಶಗಳು ಲಭ್ಯವಾಗುತ್ತಿರುವುದನ್ನು ಅಲ್ಲಗಳೆಯಲಾಗುತ್ತಿಲ್ಲ. ಜಾಗತೀಕರಣ ಆಕಾಶದಲ್ಲಿ ತೇಲುತ್ತಿದ್ದರೂ ನೆಲದ ಮೂಲದಲ್ಲಿ ತೆವಳುವ ಎರೆಹುಳುವಂತೆ ಜೀವವನ್ನು ಉಳಿಸಿಕೊಳ್ಳುವ ನೆಲದ ಸಂಸ್ಕೃತಿಯ ಬೇರುಗಳು ಮತ್ತಷ್ಟು ಗಟ್ಟಿಯಾಗಬೇಕು.

ಈ ಲೇಖನವನ್ನೇ ಮತ್ತಷ್ಟು ವಿವೇಚನೆಯಿಂದ ವಿಶ್ಲೇಷಿಸಲು ಸಾಧ್ಯವಿದ್ದಾಗಲೂ ಅವಕಾಶವಿದ್ದರೂ ಮುಗಿಸಬೇಕೆಂಬ ಸೀಮಿತ ಚೌಕಟ್ಟುಗಳಿರುವುದರಿಂದ ಮುಗಿಸುವುದು ಅನಿವಾರ್ಯವಾಗಿದೆ. ಎಲ್ಲ ಕಾಲಕ್ಕೂ ಜನಪದಗೀತೆಗಳು ಉಳಿಯುತ್ತವೆಂದು ಹೇಗೆ ನಂಬಿಕೆಯೋ ಅದನ್ನು ಬೆಳೆಸುವ ಮನಸ್ಸಿನ್ನು ಗಟ್ಟಿಗೊಳಿಸಬೇಕಾದುದು ಕರ್ತವ್ಯವಾಗುತ್ತದೆ. ವಿಜ್ಞಾನದ ಅತಿವೇಗವು ವಿನಾಶದಂಚಿಗೆ ದೂಡಿದಾಗ ಮತ್ತೆ ಮೂಲಮಣ್ಣಿಗೆ ಋಣಿಯಾಗುವ, ವಾಪಾಸಾಗುವ ಸಂಸ್ಕೃತಿ ಮತ್ತೆ ಮತ್ತೆ ಹಿಂದಿನದನ್ನು ಪರಿಷ್ಕರಿಸುವ ಚಲನೆಗೆ ಬರುವ ಕಾಲ ದೂರವಿಲ್ಲ. ಹಾಗಾಗಿ ಭೂಮಿಯೊಳಗೆ ಇರುವ ಎಲ್ಲವೂ ನಮ್ಮನ್ನು ಸಂರಕ್ಷಿಸುತ್ತಿವೆ. ಜನಪದಗೀತೆಯೂ ಹಾಗೆಯೇ ನಮ್ಮ ಬುದ್ಧಿ ವಿವೇಕದೊಳಗೆ ಜನಪದಗೀತೆಗಳ ಪ್ರಭಾವವನ್ನು ಯಾರೂ ಅಲ್ಲಗಳೆಯಲಾಗುವುದಿಲ್ಲ.

**ಪರಾಮರ್ಶನ ಗ್ರಂಥಗಳು**


1. ಗರತಿಯ ಹಾಡು: ಹಲಸಂಗಿಯ ಚೆನ್ನಮಲ್ಲಪ್ಪ, ಲಿಂಗಪ್ಪರೇವಪ್ಪ
2. ಮಲ್ಲಿಗೆಯ ದಂಡೆ, :ಕಾವತೆ ರೇವಪ್ಪ
3. ಜಾನಪದ ಸಾಹಿತ್ಯ ಮತ್ತು ಸ್ವರೂಪ :ಸಂ.ಸಂಧ್ಯಾರೆಡ್ಡಿ, ಪ್ರೊ.ಡಿ.ಲಿಂಗಯ್ಯ
4. ಜನಪದ ಗೀತಾಂಜಲಿ :ದೇ.ಜವರೇಗೌಡ
5. ಜೀವನ ಸಂಗೀತ :ಸಿಂಪಿಲಿಂಗಣ್ಣ, ಪಿ.ಧೂಲಾ
6. ಹಳ್ಳಿಯ ಹಾಡುಗಳು :ಗೊರೂರು ರಾಮಸ್ವಾಮಿ ಅಯ್ಯಂಗಾರ್
7. ಲೋಕಗೀತೆಗಳು :ಬಿ.ಎಸ್.ಗದ್ದಗಿಮಠ